ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: https://kptcl.karnataka.gov.in/
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521
(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)

ಸಂಖ್ಯೆ: ಕವಿಪ್ರನಿನಿ/ಬಿ16/5607(5)/2000-01

ದಿನಾಂಕ: 30 AUG 2021

## ಅಧಿಸೂಚನೆ

ವಿಷಯ: ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಕುರಿತು.

ಉಲ್ಲೇಖ:
1. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/5607(2)/2000-01 ದಿನಾಂಕ: 07.05.2020.
2. ದಿನಾಂಕ: 24.06.2021 ರಂದು ನಡೆದ ನಿಗಮದ ನಿರ್ದೇಶಕರುಗಳ ಸಭೆಯ ವಿಷಯ (ಸಂಖ್ಯೆ: 125/ಎ01).

***

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ (ಜ್ಯೇಷ್ಠತಾ) ನಿಯಮಗಳಿಗೆ ಈ ಕೆಳಕಂಡಂತೆ ತಿದ್ದುಪಡಿ ಮಾಡಲು ಇಚ್ಛಿಸುತ್ತದೆ.

1. <u>ಶೀರ್ಷಿಕೆ ಮತ್ತು ಆರಂಭ</u>

(ಅ) ಈ ನಿಯಮಗಳನ್ನು ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ (ತಿದ್ದುಪಡಿ) ನಿಯಮಗಳು, 2021 ಎಂದು ಕರೆಯತಕ್ಕದ್ದು.

(ಆ) ಈ ತಿದ್ದುಪಡಿಯು ದಿನಾಂಕ: 24.06.2021 ರಿಂದ ಅನ್ವಯವಾಗುವಂತೆ ಜಾರಿಗೆ ಬಂದಿರುತ್ತದೆ.

2. <u>ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ(ಜ್ಯೇಷ್ಠತಾ) ನಿಯಮಗಳ ಅಧ್ಯಾಯ 6 ರ ಕ್ರಮ ಸಂಖ್ಯೆ: 12(ಬಿ)(1) ಕ್ಕೆ ತಿದ್ದುಪಡಿ.</u>

ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ(ಜ್ಯೇಷ್ಠತಾ) ನಿಯಮಗಳ ಅಧ್ಯಾಯ 6 ರ ಕ್ರಮ ಸಂಖ್ಯೆ: 12(ಬಿ)(1) ರಲ್ಲಿ ಸೇವೆಯಲ್ಲಿರುವ ನೌಕರರಿಗೆ ಮೀಸಲಿರಿಸಿದ ಶೇಕಡ 10 ರ ಕೋಟಾದಲ್ಲಿ ಕಿರಿಯ ಇಂಜಿನಿಯರ್(ವಿ) ಹುದ್ದೆಯ ಬಡ್ತಿಗೆ ನಿಗಧಿಪಡಿಸಿರುವ ಕನಿಷ್ಠ ಅರ್ಹತೆಯನ್ನು ಈ ಅಧಿಸೂಚನೆಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವಂತೆ ತಿದ್ದುಪಡಿ ಮಾಡಲಾಗಿದೆ.

ಆದೇಶದ ಮೇರೆಗೆ,

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಪು.ತಿ.ನೋ....

ಅನುಬಂಧ

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/5607(5)/2000–01 ದಿನಾಂಕ: 30 AUG 2021 ರ ಅನುಬಂಧ

**Annexure to Notification No: KPTCL/B16/5607(V)/2000-01 dated:**

ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಗಳು, ನೌಕರರ (ಅರ್ಹತಾ ಪರೀಕ್ಷಣೆ) ನಿಯಮಗಳು ಮತ್ತು ನೌಕರರ(ಜ್ಯೇಷ್ಠತಾ) ನಿಯಮಗಳ ಅಧ್ಯಾಯ 6 ರ ಕ್ರಮ ಸಂಖ್ಯೆ: 12(ಬಿ)(1) ಕಿರಿಯ ಇಂಜಿನಿಯರ್(ವಿ) ಹುದ್ದೆಯ ಕನಿಷ್ಟ ಅರ್ಹತೆಗೆ ತಿದ್ದುಪಡಿ.

**AMENDMENT TO MINIMUM QUALIFICATION PRESCRIBED FOR THE POST OF JUNIOR ENGINEER(ELE) IN SL NO. 12(B) CHAPTER-VI OF THE KPTCL RECRUITMENT AND PROMOTION REGULATIONS, EMPLOYEES (PROBATION) REGULATIONS AND EMPLOYEES (SENIORITY) REGULATIONS.**

| ಕ್ರಮ ಸಂಖ್ಯೆ<br>Sl No | ಹುದ್ದೆಯ ಪ್ರವರ್ಗ<br>Category of Post | ನೌಕರಿ ಭರ್ತಿ ವಿಧಾನ<br>Method of Recruitment | ಕನಿಷ್ಟ ಅರ್ಹತೆ<br>Minimum Qualification | |
|---|---|---|---|---|
| | | | ಚಾಲ್ತಿಯಲ್ಲಿರುವುದು<br>As Existing | ತಿದ್ದುಪಡಿ ಮಾಡಿರುವುದು<br>As Amended |
| 12 | ಕಿರಿಯ ಇಂಜಿನಿಯರ್(ವಿ)/ಉಗ್ರಾಣ ಪಾಲಕ ದರ್ಜೆ–2 | ಬಿ(1).ಖಾಲಿ ಹುದ್ದೆಗಳ ಲಭ್ಯತೆಗೊಳಪಟ್ಟು, ಹುದ್ದೆಗಳ ಶೇಕಡ 10 ರಷ್ಟನ್ನು ಜ್ಯೇಷ್ಠತೆ ಮತ್ತು ಯೋಗ್ಯತೆ ಆಧಾರದಲ್ಲಿ ಕೆಳಗಿನ ಯಾವುದೇ ಪದವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಬಡತಿಯ ಮುಖಾಂತರ ಭರ್ತಿ ಮಾಡುವುದು.<br><br>**ಟಿಪ್ಪಣಿ:**<br>ಪ್ರಾರಂಭಿಕ ಸೇವೆಗೆ ಸೇರಿದ ದಿನಾಂಕದಿಂದ ಸೇವಾ ಜ್ಯೇಷ್ಠತೆ ಹಾಗೂ | **ಪದೋನ್ನತಿ:**<br>1. ನಿಯತ ಕಾಲೇಜಿನ ಮುಖಾಂತರ ಕರ್ನಾಟಕದ ಪಾಲಿಟೆಕ್ನಿಕ್‌ನಿಂದ ಎಲೆಕ್ಟ್ರಿಕಲ್ /ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಹೊಂದಿರತಕ್ಕದ್ದು.<br>2. ಕೆಳಗಿನ ಹುದ್ದೆಯಲ್ಲಿ ಕನಿಷ್ಟ 10 ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು.<br>3. ಕಾರ್ಯನಿರ್ವಾಹಕ ಕಿರಿಯ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು.<br>4. ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು ಅಥವಾ ನಿಯಮಗಳ ಪ್ರಕಾರ ಕನ್ನಡ ಭಾಷಾ ಪರೀಕ್ಷೆ | **ಪದೋನ್ನತಿ:**<br>1. ನಿಯತ ಕಾಲೇಜಿನ ಮುಖಾಂತರ ಕರ್ನಾಟಕದ ಪಾಲಿಟೆಕ್ನಿಕ್‌ನಿಂದ ಎಲೆಕ್ಟ್ರಿಕಲ್ /ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಹೊಂದಿರತಕ್ಕದ್ದು.<br>2. ಕೆಳಗಿನ ಹುದ್ದೆಯಲ್ಲಿ ಕನಿಷ್ಟ 10 ವರ್ಷಗಳ ಸೇವೆಯನ್ನು ಸಲ್ಲಿಸಿರತಕ್ಕದ್ದು.<br>3. ಕಾರ್ಯನಿರ್ವಾಹಕ ಕಿರಿಯ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು.<br>4. ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗತಕ್ಕದ್ದು ಅಥವಾ ನಿಯಮಗಳ ಪ್ರಕಾರ ಕನ್ನಡ ಭಾಷಾ ಪರೀಕ್ಷೆ |

| | | | | |
|---|---|---|---|---|
| | | ಅರ್ಹತಾದಾಯಕ ಸೇವೆಯನ್ನು ಪರಿಗಣಿಸತಕ್ಕದ್ದು. | ಉತ್ತೀರ್ಣತೆಯಿಂದ ವಿನಾಯಿತಿ ಪಡೆಯತಕ್ಕದ್ದು.<br><br>5. ವಯೋಮಿತಿಯನ್ನು ನಿಗಧಿಪಡಿಸಿರುವುದಿಲ್ಲ.<br><br>**ಟಿಪ್ಪಣಿ:**<br>ದಿನಾಂಕ: 11.03.2020 ಕ್ಕಿಂತ ಮುಂಚಿತವಾಗಿ ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದ ಅಭ್ಯರ್ಥಿಗಳನ್ನು ಬಡತಿಗಾಗಿ ಪರಿಗಣಿಸತಕ್ಕದ್ದು. ಈ ಅವಕಾಶವನ್ನು ಕೇವಲ ಒಂದು ಬಾರಿಗೆ ಮಾತ್ರ ಕಲ್ಪಿಸಲಾಗಿರುತ್ತದೆ ಮತ್ತು ಇದನ್ನು ಪೂರ್ವನಿದರ್ಶನವಾಗಿಸಿ ಭವಿಷ್ಯದಲ್ಲಿ ಮನವಿಗಳನ್ನು ಪರಿಗಣಿತಕ್ಕದ್ದಲ್ಲ. | ಉತ್ತೀರ್ಣತೆಯಿಂದ ವಿನಾಯಿತಿ ಪಡೆಯತಕ್ಕದ್ದು.<br><br>5. ವಯೋಮಿತಿಯನ್ನು ನಿಗಧಿಪಡಿಸಿರುವುದಿಲ್ಲ.<br><br>**ಟಿಪ್ಪಣಿ:**<br>ದಿನಾಂಕ: 22.04.2015 ರಂದು ಅಥವಾ ಇದಕ್ಕಿಂತ ಮುಂಚಿತವಾಗಿ ಎಲೆಕ್ಟ್ರಾನಿಕ್ಸ್ (ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್), ಟೆಲಿಕಮ್ಯುನಿಕೇಷನ್ ಮತ್ತು ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ಪಡೆದಂತಹ ಅಭ್ಯರ್ಥಿಗಳನ್ನು ಮತ್ತು ಕವಿಪ್ರನಿನಿ/ಎಸ್ಕಾಂಗಳ ಮೂಲಕ ನಿರಾಕ್ಷೇಪಣಾ ಪತ್ರವನ್ನು ಪಡೆದು, ಎ.ಐ.ಸಿ.ಟಿ.ಇ ಮತ್ತು ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದ ಕಾಲೇಜಿನಲ್ಲಿ ಮೇಲ್ಕಂಡ ಡಿಪ್ಲೋಮ ವಿದ್ಯಾರ್ಹತೆಯನ್ನು ಪಡೆಯಲು ದಿನಾಂಕ: 22.04.2015 ರಂದು ಅಥವಾ ಇದಕ್ಕಿಂತ ಮುಂಚಿತವಾಗಿಯೆ ಪ್ರವೇಶಾತಿ ಹೊಂದಿ ತದನಂತರದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳನ್ನು ಪದೋನ್ನತಿಗೆ ಪರಿಗಣಿಸತಕ್ಕದ್ದು. |
| 12 | Junior Engineer (Ele)/Store Keeper | **B(i)** 10% of the posts to be filled up by way of promotion from among in-service employees working in any lower cadre on the basis of seniority-cum-merit subject to availability of vacancy.<br><br>**Note:** Seniority and qualifying service shall be reckoned from the date of initial entry into service. | a) Should possess/acquire Diploma qualification in Electrical/Electrical & Electronics Engineering of a polytechnic of Karnataka only through regular college mode.<br>b) Should have put in a minimum service of 10 (Ten) years in any lower cadre.<br>c) Should have passed Executive Lower Examination.<br>d) Should have passed Kannada Language Test or obtained exemption from passing Kannada Language Test as per Regulations.<br>e) No Age limit is prescribed.<br><br>**Note: Candidates who have already acquired Diploma in Electronics &** | a) Should possess/acquire Diploma qualification in Electrical/Electrical & Electronics Engineering of a polytechnic of Karnataka only through regular college mode.<br>b) Should have put in a minimum service of 10 (Ten) years in any lower cadre.<br>c) Should have passed Executive Lower Examination.<br>d) Should have passed Kannada Language Test or obtained exemption from passing Kannada Language Test as per Regulations.<br>e) No Age limit is prescribed.<br><br>**Note: Candidates who have already acquired Diploma in Electronics** |

| | | | | |
|---|---|---|---|---|
| | | | Communication Engineering prior to 11.03.2020 can be considered for promotion. This is only a onetime measure and cannot be sighted as precedence for future requests. | (Electronics & Communication), Telecommunication and Mechanical Engineering on or prior to 22.04.2015 and also such employees, who have duly admitted to the Diploma college recognized by AICTE & Technical Education Board of Karnataka for these disciplines on or prior to 22.04.2015 by obtaining prior permission from KPTCL/ESCOMs and passed the same at a later date, can be considered for promotion. |

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ಕವಿಪ್ರನಿನಿ